# ಭಾರತದ ಸಂಸ್ಕೃತಿಯಲ್ಲಿ ದೇವಾಲಯದ ಪಾತ್ರ

◆ ಸೋಸಲೆ ಶ್ರೀನಿವಾಸಾಚಾರ್

**ಭಾ**ರತದ ಸಂಸ್ಕೃತಿಯು ಅಭಿವ್ಯಕ್ತವಾಗಿರುವ ಬಗೆಗಳು ನಾನಾ ವಿಧ. ಒಟ್ಟಿನಲ್ಲಿ ನೋಡಿದರೆ ಈ ಎಲ್ಲ ರೂಪಗಳ ಜೀವನಾಡಿಯೂ ಬಹುತೇಕವಾಗಿ ಕಲಾಭಿಮುಖವಾಗಿದೆ ಎಂದೇ ಹೇಳಬಹುದು. ಸಾಹಿತ್ಯ, ಸಂಗೀತ, ನಾಟಕ, ನಾಟ್ಯ, ಶಿಲ್ಪ, ವಾಸ್ತುಶಿಲ್ಪ, ವರ್ಣಚಿತ್ರ, ಹರಿಕಥೆ, ಶಿವಕಥೆ, ಹಬ್ಬಗಳು, ಜಾತ್ರೆ ಮತ್ತು ಉತ್ಸವಾದಿಗಳು, ದೈನಂದಿನ ಕರ್ಮಗಳು, ಪೂಜಾ ವಿಧಾನಗಳು ಹೀಗೆ ಪ್ರತಿಯೊಂದೂ ಹಿಂದೂ ಸಂಸ್ಕೃತಿಗೆ ಮೆರುಗನ್ನು ನೀಡಿವೆ. ಅನೇಕ ವ್ಯಕ್ತರೂಪಗಳಲ್ಲಿ ಅನೂಚಾನವಾಗಿ ಕಂಡುಬರುವ ನಮ್ಮ ಮನೋಧರ್ಮವು ಪ್ರಮುಖವಾಗಿ ದೈವಾಭಿಮುಖವಾದದ್ದು, ನಮ್ಮ ನೈಸರ್ಗಿಕ ಆವರಣವನ್ನು ಹೊಕ್ಕು ಅನೇಕ ಶತಮಾನಗಳ ಕಾಲದಲ್ಲಿ ವಿಕಸಿತವಾಗಿರುವ ಒಂದು ವಿಶಿಷ್ಟವಾದ ಮನೋವೃತ್ತಿ. ಭಾರತೀಯನ ಈ ಮನೋಧರ್ಮವು ಪ್ರಕೃತಿಯಲ್ಲಿ ಸಹಜ ವಾಗಿ ಅಡಗಿರುವ ಲಯವನ್ನು(rhythm) ಹೇಗೆ ಧಾರ್ಮಿಕ ಜೀವನದಲ್ಲಿ ಅಳವಡಿಸಿಕೊಂಡು ರಸಪ್ರಜ್ಞೆಗೆ ರೂಪುರೇಖೆ ಯನ್ನು ಕೊಟ್ಟಿದೆ ಎಂಬುದನ್ನು ಅರ್ಥ ಮಾಡಿಕೊಂಡರೆ ಮಾತ್ರ ಇದನ್ನು ತಿಳಿಯಲು ಸಾಧ್ಯ.

ಭಾರತದ ಕಲೆಯು ಯೂರೋಪಿನ ಮಧ್ಯಯುಗದ ಕಲೆ ಯಂತೆಯೇ ಧಾರ್ಮಿಕ, ಸಾಂಕೇತಿಕ, ಹಾಗೂ ಪರಂಪರೆಯ ಚೌಕಟ್ಟಿನಲ್ಲಿ ವಿಕಾಸಗೊಂಡ ಕಲೆ. ಇದರ ವಿಶೇಷ ಲಕ್ಷಣ ವೆಂದರೆ ಅಸ್ಪಷ್ಟವೂ, ಅವೇದ್ಯವೂ ಆದ ದೈವೀ ಭಾವವನ್ನು ರಸಾಸ್ವಾದನೆಯ ಮೂಲಕ ಎಲ್ಲರ ಅನುಭವಕ್ಕೂ ದೊರಕು ವಂತೆ ಮಾಡಿರುವುದು. ಈ ಪ್ರೇರಣೆಯು ಹೇಗೆ ನಮ್ಮ ಕಾವ್ಯಪರಂಪರೆಗೆ ಸಹಜವಾದದ್ದೋ ಹಾಗೆಯೇ ಕಲೆಗೂ ಹೌದು. ಎರಡರದೂ ಒಂದೇ ಧ್ಯೇಯ. ಅಲಂಕಾರ ಶಾಸ್ತ್ರವು ಕಾವ್ಯಕ್ಕೆ ಹೇಗೆ ಮುಖ್ಯವೋ ಹಾಗೆಯೇ ಆಗಮಬದ್ಧವಾದ ಶಿಲ್ಪಶಾಸ್ತ್ರವು ಮೂರ್ತಿಕಲೆಗೂ ವಾಸ್ತುಶಿಲ್ಪಕ್ಕೂ ಮುಖ್ಯ. ತಾಳ ಬದ್ಧವಾದ ಸಂಗೀತವು ನಾಟ್ಯಕ್ಕೆ ಹೊಂದಿಕೊಂಡಿರುವ ರೀತಿ ಯಲ್ಲಿ ನಾಟ್ಯಕಲೆಯ ಮುದ್ರಾ ವಿಶೇಷಗಳು ಶಿಲ್ಪಕಲೆಯಲ್ಲಿ ಅಳವಡಿಸಲ್ಪಟ್ಟಿವೆ. ಸ್ಥೂಲವಾದ ಬುದ್ಧಿಶಕ್ತಿಗೆ ಸಿಗದ ಮೂಲ ತತ್ತ್ವಗಳನ್ನು ಕಣ್ಣಿಗೆ ಕಾಣುವಂತೆ ಮಾಡುವುದಕ್ಕೆ ಅಳವಡಿಸಿ ಕೊಂಡಿರುವ ಸಾಧನಗಳು ಹಲವು. ಅವು ಯಾವುವೆಂದರೆ, ಸಂಪ್ರದಾಯಶೈಲಿಗೆ ಕೊಟ್ಟಿರುವ ಮಾನ್ಯತೆ, ಆಗಮಶಾಸ್ತ್ರದ ನಿಯಮಾವಳಿಗಳು, ಶಿಲ್ಪಿಯ ವೈಯಕ್ತಿಕ ಪ್ರತಿಭೆ, ಅವನ ಕರಕೌಶಲ್ಯ ಮತ್ತು ಜನಾನುಮೋದನೆ. ಹಿಂದೂಧರ್ಮದಲ್ಲಿ ಮೋಕ್ಷವೇ ಪರಮಪುರುಷಾರ್ಥವೆಂದು ಪ್ರತಿಪಾದಿತ ವಾಗಿದ್ದರೂ, ಈ ಗುರಿಯು ಜನಸಾಮಾನ್ಯರ ತಿಳಿವಳಿಕೆಗೆ ಮೀರಿರುವುದು. ಅವರ ಜೀವನವು ಇದರಿಂದ ಪ್ರಭಾವಿತ ವಾಗುವುದು ಕಷ್ಟ. ಅದು ಅವರ ಹಿಡಿತಕ್ಕೆ ಸಿಕ್ಕಬೇಕಾದರೆ ಅಮೂರ್ತವಾಗಿರುವ ಭಾವಕ್ಕೆ ರೂಪವನ್ನು ಕೊಡಬೇಕು. ಹೀಗೆ ರೂಪುಗೊಂಡ ಕಲೆಯು ರಸಮಯವಾಗಿರಬೇಕಾದರೆ ಭಗವಂತನ ಲೀಲಾವಿಶೇಷಗಳನ್ನು ಎತ್ತಿತೋರಿಸಬೇಕು.

ತತ್ತ್ವದೃಷ್ಟಿಯಿಂದ ಅಮೂರ್ತವಾಗಿರುವ ವಸ್ತುವು ರೂಪ ವನ್ನು ತಾಳುವುದು ಹೇಗೆ? **ಅಜಾಯಮಾನೋ ಬಹುಧಾ ವಿಜಾಯತೇ** ಎಂಬುದು ವೇದವಾಕ್ಯ. ಈ ರೂಪವು ನಮ್ಮ ಇಂದ್ರಿಯಜ್ಞಾನದ ಇತಿಮಿತಿಗಳಿಗೆ ಒಳಪಟ್ಟಿದ್ದರೆ ಮಾತ್ರ ಸಾಧ್ಯ ಎನ್ನುವುದೇ ಈ ಪಕ್ಷ. ಅದು ನಮ್ಮ ಸ್ಥೂಲಮನಸ್ಸಿಗೆ ಗ್ರಾಹ್ಯ ವಾಗಿರಬೇಕು ಎಂದಮೇಲೆ ಅಲ್ಪಸ್ವಲ್ಪ ಮಟ್ಟಿಗಾದರೂ ದೈವತ್ವ ವನ್ನು ಸ್ಪಷ್ಟೀಕರಿಸಲೇಬೇಕು. ಈ ದೃಷ್ಟಿಯಿಂದ ಪಾರಂಪರ್ಯ ವಾಗಿ ಅನುಮೋದನೆ ಪಡೆದುಕೊಂಡು ಬಂದಿರುವ ಪುರಾಣೇತಿಹಾಸಗಳು, ವಾಸ್ತು ಮತ್ತು ಶಿಲ್ಪಶಾಸ್ತ್ರ ಇವುಗಳ ಆಧಾರದ ಮೇಲೆ ದೈವತ್ವವನ್ನು ಅಭಿವ್ಯಕ್ತಗೊಳಿಸಿ ಜನರಲ್ಲಿ ಧರ್ಮಶ್ರದ್ಧೆಯನ್ನು ಉಂಟುಮಾಡುವುದೇ ಆಗಿನ ಶಿಲ್ಪಿಗಳ ಸಂಕಲ್ಪ, ಕಲೆಯ ಧ್ಯೇಯ. ಕ್ರಿ.ಶ. ಐದನೆಯ ಶತಮಾನದಿಂದ ಸುಮಾರು ಸಾವಿರ ವರ್ಷಗಳ ವಿಸ್ತಾರದಲ್ಲಿ ಈ ಶ್ರದ್ಧಾಮಯ ವಾದ ಶಿಲ್ಪವನ್ನೂ, ವಾಸ್ತುಶಿಲ್ಪವನ್ನೂ ಬೆಳೆಸಿಕೊಂಡು ಬಂದಿರುವುದು ಹಿಂದೂ ಸಂಸ್ಕೃತಿಯ ಪ್ರಮುಖ ಲಕ್ಷಣ.

ಬಹುಮಟ್ಟಿಗೆ ನಮ್ಮ ಮಾರ್ಗೀಯ ಕಾವ್ಯದಲ್ಲಿ ಎದ್ದು ಕಾಣುವ ರಾಜರಸವೆಂದರೆ ಭಕ್ತಿರಸ. ಕಾವ್ಯದ ಗುಣಪರೀಕ್ಷೆ ಯನ್ನು ಮಾಡುವ ಒರೆಗಲ್ಲು ನವರಸಗಳಾದರೂ, ಪ್ರಾಚೀನ ಕಲೆ, ಕಾವ್ಯಗಳಲ್ಲಿ ಪ್ರಧಾನವಾಗಿರುವುದು ಭಕ್ತಿರಸವೇ. ಇತರ ರಸಗಳು ಇವಕ್ಕೆ ಅಧೀನವಾಗಿಯೋ ಪೋಷಕವಾಗಿಯೋ ಉಪಯೋಗಿಸಲ್ಪಟ್ಟಿವೆ. ದೈವತ್ವದ ಅಭಿವ್ಯಕ್ತಿಯೆಂದೆಣಿಸಿರುವ ಈ ಸಂಸ್ಕೃತಿಗೆ ಜೀವಕಳೆಯನ್ನು ತುಂಬಿ ರಸಭರಿತವಾಗಿಯೂ,

ನಮ್ಮ ದೇವಾಲಯಗಳ ವಾಸ್ತುಶಿಲ್ಪದ ಹಿನ್ನಲೆಯಲ್ಲಿರುವ ಉದಾತ್ತ ತತ್ತ್ವ ಹಾಗೂ ದೇವಾಲಯಗಳು ಸಮಾಜದ ಕೇಂದ್ರ ಬಿಂದುಗಳಾಗಿದ್ದವು ಎಂಬುದರ ಬಗ್ಗೆ ಚರ್ಚಿಸಿರುವ ಶ್ರೀ ಸೋಸಲೆ ಶ್ರೀನಿವಾಸಾಚಾರ್ಯರು ವಾಸ್ತುಶಿಲ್ಪದ ಬಗ್ಗೆ ಆಳವಾದ ಅಧ್ಯಯನ ನಡೆಸಿರುವ ಹಿರಿಯ ಪಂಡಿತರು ಹಾಗೂ ಬೆಂಗಳೂರಿನ ನಿವಾಸಿಗಳು.

ಅನುಭವಯೋಗ್ಯವಾಗಿಯೂ ಮಾಡುವುದೇ ಇದರ ಉದ್ದೇಶ. ರಸಾಸ್ವಾದನೆಗೂ, ಧಾರ್ಮಿಕ ಜೀವನಕ್ಕೂ, ದೈವಾನುಭವಕ್ಕೂ ಹೊಂದಾಣಿಕೆ ಮಾಡಿ ಮೂರನ್ನೂ ಸಮತೋಲನವಾಗಿಸುವ ಮನೋಧರ್ಮವು ಹೇಗೆ ಬಂತು? ಭಕ್ತಿಪಂಥದ ಚರಿತ್ರೆಯಲ್ಲಿ ಹಾಸುಹೊಕ್ಕಾಗಿರುವ ಕಾವ್ಯವೂ, ಕಲೆಯೂ ಹೇಗೆ ವಿಕಾಸ ಗೊಂಡುವು? ಇದನ್ನು ಪರಿಶೀಲಿಸಿದರೆ ಕಾಣುವ ಅಂಶಗಳು ಗಮನಾರ್ಹ. ಜನರ ಆದರಣೆಗೆ ಪಾತ್ರವಾದ ವಸ್ತು ಅದ್ವೈತದ ನಿರಾಕಾರ ಬ್ರಹ್ಮನಾಗಿರಲು ಕಷ್ಟಸಾಧ್ಯ. ಭಕ್ತರ ಬೇಡಿಕೆಗೆ ಕಿವಿ ಗೊಡುವ, ಬಹುರೂಪಿಯಾಗಿ ಆವಿರ್ಭವಿಸುವ ಸರ್ವೇಶ್ವರನು ಸದ್ಗುಣಗಳ ಚಿಲುಮೆ. ಜಾತಿ, ಮತ, ಲಿಂಗಭೇದವಿಲ್ಲದೆ ಭಕ್ತಿಮಾರ್ಗದಲ್ಲಿ ಹೋದವರಿಗೆ ಲಭಿಸುವ ಇಂದ್ರಿಯ ಗ್ರಾಹ್ಯವಾದ ಆನಂದದಾತ. ದೈನ್ಯದಿಂದ ಬೇಡುವ ಶರಣಾರ್ಥಿಗೆ ಅನುಗ್ರಹಿಸುವ ವರಪ್ರದಾತ. ಆದ್ದರಿಂದ ಈ ಕಲೆಯು ವಿಕಾಸಗೊಂಡ ಯುಗವು ಭಕ್ತಿಪರಂಪರೆಗೆ ಸಮಕಾಲೀನ. ಭಕ್ತಿಗೆ ಶ್ರದ್ಧೆಯೇ ಆಧಾರವಾದ್ದರಿಂದ ಆಗಿನ ಸಮಾಜಜೀವನದಲ್ಲಿ ಕಂಡುಬರುವ ಆಧಾರ ಮೌಲ್ಯಗಳು: ಸ್ಫೂರ್ತಿ, ಪರಂಪರೆ, ಕರಕೌಶಲ, ಪೂಜಾ ವೈಖರಿ ಮತ್ತು ವೈರಾಗ್ಯ ಮನೋಭಾವ, ಪಾರಮಾರ್ಥಿಕ ಧ್ಯೇಯಕ್ಕೋಸ್ಕರ ತಮ್ಮ ಜೀವನವನ್ನೇ ಮುಡಿಪಾಗಿಡುವ ಅಸಾಧಾರಣ ವಿರಕ್ತಿಭಾವ. ತಾವು ಕೀರ್ತಿಶಾಲಿಗಳಾಗಬೇಕೆಂದಾಗಲೀ, ಸಿರಿವಂತರಾಗಬೇಕೆಂದಾಗಲೀ ಕಲಾವಿದರು ಮಾಡಿದ ಕೆಲಸವಲ್ಲ, ಇದು. ಕೇವಲ ಸ್ವಾರ್ಥಕ್ಕೆ ಮಾಡುವ ಕೆಲಸವು ಚಿರಸ್ಥಾಯಿಯಾಗಿ ಉಳಿಯುವುದು ಕಷ್ಟ. ಇದು ನಮ್ಮೆಲ್ಲರ ಅನುಭವ. ಆದರೂ ಈ ಕಲೋಪಾಸಕರ ಅಸಾಧಾರಣ ಕೌಶಲಕ್ಕೆ ರಾಜಪುರಸ್ಕಾರವಿತ್ತು. ಅಂದಿನ ಸಮಾಜವು ಶಿಲ್ಪಿಗಳಿಗೂ, ಇತರ ಕಾರ್ಮಿಕರಿಗೂ ಊಟವಸತಿಗಳನ್ನು ಒದಗಿಸಿರಲೇಬೇಕು. ವೇದಪಾರಂಗತರಿಗೂ, ಬೌದ್ಧವಿಹಾರ ಗಳಿಗೂ, ನಿರ್ಗ್ರಂಥಿಗಳಾದ ಜೈನಮುನಿವರ್ಯರಿಗೂ, ಇತರ ಶಾಸ್ತ್ರಜ್ಞರಿಗೂ ರಾಜವಂಶದವರು ಉದಾರವಾಗಿ ವಸತಿ ಯನ್ನೂ, ವರಮಾನವನ್ನೂ, ಕಲ್ಪಿಸಿಕೊಟ್ಟಿದ್ದಕ್ಕೆ ಅನೇಕ ಶಾಸನ ಗಳ ಆಧಾರವುಂಟು. ನಮ್ಮ ದೇಶದ ಪ್ರಸಿದ್ಧ ದೇವಾಲಯ ಗಳನ್ನು ನಿರ್ಮಿಸಿದವರು ಅನಾಮಧೇಯರಾಗಿಯೇ ಉಳಿ ದಿರುವುದು ಗಮನಾರ್ಹ. ಈ ವೈರಾಗ್ಯ ವೈಚಿತ್ರ್ಯವು ಸ್ವಾರ್ಥ ಸಂಪನ್ನರಾದವರನ್ನು ಬೆರಗುಗೊಳಿಸುವುದರಲ್ಲಿ ಆಶ್ಚರ್ಯ ವೇನು? ಇದು ನಮ್ಮ ಭಾರತೀಯ ಪರಂಪರೆಗೆ ಮಾತ್ರ ಅನ್ವಯಿಸುವ ಮಾತಲ್ಲ. ಇತರ ದೇಶಗಳ ಪುರಾತನ ಸಂಸ್ಕೃತಿ ಗಳಿಗೂ ಇದೇ ಪ್ರಮಾಣದಲ್ಲಿ ಅನ್ವಯಿಸುತ್ತದೆ. ಆಸ್ತಿಕತೆಯೇ ಪ್ರಧಾನವಾಗಿದ್ದ ಆ ಯುಗದಲ್ಲಿ ಶಿಲ್ಪಿಗಳು ಬೆಳೆಸಿಕೊಂಡು ಬಂದ ಕಲಾಕೌಶಲ್ಯವು ನಮ್ಮನ್ನು ಇನ್ನೂ ಮುಗ್ಧಗೊಳಿಸುತ್ತದೆ.

ಮೊಟ್ಟಮೊದಲು ಇಸ್ಲಾಂ ಧರ್ಮದ ಹೆಸರಿನಲ್ಲಿ ನಮ್ಮ ದೇಶದ ಮೇಲೆ ದಾಳಿ ಮಾಡಲು ಬಂದಿದ್ದ ಅನೇಕರು ತಾವು ಕಂಡ ದೇಗುಲಗಳನ್ನೂ, ಕಲ್ಯಾಣಿ ಪುಷ್ಕರಣಿಗಳನ್ನೂ ನೋಡಿ ಮನಸೋತರು. ಮತಾಂಧತೆಯಿಂದ ಇವುಗಳಿಗೆ ಅಲ್ಲಲ್ಲಿ ಹಾನಿಮಾಡಿದ್ದರೂ, ಮುಕ್ತಕಂಠದಿಂದ ಈ ಕಲಾಕೌಶಲ ವನ್ನು ಪ್ರಶಂಸಿಸಿದ್ದಾರೆ. ಇದಕ್ಕೆ ಅವರು ಬರೆದಿಟ್ಟಿರುವ ಮಾತು ಗಳೇ ಸಾಕ್ಷಿ. ಮೊಹಮ್ಮದ್ ಘಸ್ನಿಯೊಂದಿಗೆ ಭಾರತಕ್ಕೆ ಬಂದ ಯಾತ್ರಿಕ, ತಜ್ಞ ಅಲ್ಬೆರೂನಿ ಈ ರೀತಿ ಬರೆದಿದ್ದಾನೆ: "ಈ ದೇಶದ ತೀರ್ಥಕ್ಷೇತ್ರಗಳಲ್ಲಿ ಹಿಂದೂಗಳು ಕಟ್ಟಿರುವ ಸ್ನಾನ ಘಟ್ಟಗಳೂ, ಪುಷ್ಕರಣಿಗಳೂ ಎಷ್ಟು ಸುಂದರವಾಗಿವೆಯೆಂದರೆ ಇದನ್ನು ಕಂಡ ಮುಸ್ಲಿಮರು ಆಶ್ಚರ್ಯಚಕಿತರಾಗುತ್ತಾರೆ. ಇಂತಹವನ್ನು ಕಟ್ಟುವ ಸಾಮರ್ಥ್ಯವಿರಲಿ, ಅವನ್ನು ವರ್ಣಿಸಲೂ ಅವರು ಅಶಕ್ತರು."

ಭಾರತೀಯ ಕಲೆಯಲ್ಲಿ ಕಂಡುಬರುವ ಕಲ್ಪನಾಶಕ್ತಿಯು ಸಾಂಪ್ರದಾಯಿಕ ಪ್ರಮಾಣಗಳಿಗೆ ಬಂಧಿತವಾಗಿರುವುದು ಒಂದು ಮುಖ್ಯ ಅಂಶ. ಒಂದು ದೇವಸ್ಥಾನದ ವಿವಿಧ ಭಾಗಗಳು ಅಂದರೆ— ಗರ್ಭಗೃಹ, ವಿಮಾನ, ಸುಖನಾಸಿ, ಮಂಟಪ, ಮುಖಮಂಟಪ, ಪಾರ್ಶ್ವಗಳಲ್ಲಿನ ಸಭಾಮಂಟಪ, ನಟಮಂದಿರ, ಗೋಪುರ ಇತ್ಯಾದಿ ಅಂಗಗಳು ವಾಸ್ತುಶಾಸ್ತ್ರ ದಲ್ಲಿ ನಿರೂಪಿಸಲ್ಪಟ್ಟಿವೆ. ಪ್ರಧಾನಶೈಲಿಗಳಾದ ನಾಗರ (ಉತ್ತರ ಭಾರತದ್ದು), ವೇಸರ (ಚಾಳುಕ್ಯ ಮತ್ತು ಹೊಯ್ಸಳ) ಮತ್ತು ದ್ರಾವಿಡ (ತಮಿಳುದೇಶ) ಇವೆಲ್ಲವೂ ಪ್ರಾದೇಶಿಕ ಶೈಲಿ ಗಳಾದರೂ, ಅವುಗಳ ಪ್ರಮಾಣಗಳಲ್ಲೂ, ಕೌಶಲದಲ್ಲೂ ವೈವಿಧ್ಯ ಕಂಡುಬಂದರೂ ಎಲ್ಲಕ್ಕೂ ಮೂಲಾಧಾರವಾದ ಶಾಸ್ತ್ರ ಮಾತ್ರ ಒಂದೇ. ಹೀಗೆಯೇ ಆಚಾರವಿಧಿಗಳಲ್ಲಾಗಲೀ, ಉಡುಪಿನಲ್ಲಾಗಲೀ, ಪ್ರಾದೇಶಿಕವಾದ ಲಕ್ಷಣಗಳು ಕಂಡು ಬರುವುದಿಲ್ಲವೇ? ಶಿಲ್ಪಿಯು ಶಾಸ್ತ್ರವಿಧಿಗಳನ್ನು ಉಲ್ಲಂಘಿಸಿ ಸ್ವೇಚ್ಛೆಯಾಗಿ ತನ್ನ ಕಲ್ಪನಾಶಕ್ತಿಯನ್ನೇ ಮುಂದಿಟ್ಟು ಸಾಹಸ ಮಾಡಲು ಆಗ ನಿಷೇಧವಿತ್ತು. ಇದು ವಾಸ್ತುಶಾಸ್ತ್ರಕ್ಕೇ ವಿರುದ್ಧ ವೆಂಬ ನಂಬಿಕೆಯಿದ್ದಿದ್ದರಿಂದ ಪರಂಪರೆಯನ್ನು ರಕ್ಷಿಸಿಕೊಂಡು ಬರುವುದೇ ಒಂದು ಧಾರ್ಮಿಕ ಮೌಲ್ಯವಾಗಿ ಉಳಿಯಿತು. ಸಾಂಪ್ರದಾಯಿಕ ಪ್ರಮಾಣಗಳನ್ನು ಉಲ್ಲಂಘಿಸಿದ್ದೇ ಆದರೆ ಧರ್ಮಕ್ಕೆ ಚ್ಯುತಿ ಬರುವುದೆಂಬ ಭಾವನೆಯೂ, ಅನಿಷ್ಟ ಉಂಟಾಗುವುದೆಂಬ ನಂಬಿಕೆಯೂ ಜನರಲ್ಲಿ ಬೇರೂರಿತ್ತು. ಈ ಮನೋಧರ್ಮವು ನಮ್ಮ ಬುದ್ಧಿಜೀವನದಲ್ಲಿಯೂ, ಆಚಾರ-ವ್ಯವಹಾರಗಳಲ್ಲಿಯೂ ಸಮಾಜಜೀವನದಲ್ಲಿಯೂ ಆಳವಾಗಿ ಬೇರುಬಿಟ್ಟಿದ್ದರಿಂದಲೇ ನಮ್ಮ ಸಂಸ್ಕೃತಿಯಲ್ಲಿ ಕ್ರಾಂತಿ ಕಾರಕವಾದ ಪರಿವರ್ತನೆಯಾಗಲು ಅನೇಕ ಶತಮಾನಗಳು ಕಳೆದರೂ ಸಾಧ್ಯವಾಗಲಿಲ್ಲ. ಸಂಪ್ರದಾಯಕ್ಕೆ ಮಿತಿಮೀರಿ

ಮಾನ್ಯತೆ ಕೊಡುವ ಪ್ರವೃತ್ತಿ ನಮ್ಮಲ್ಲಿ ಈಗಲೂ ಕಂಡು ಬರುತ್ತದೆ. ಇತ್ತೀಚೆಗೆ ಕಟ್ಟಿರುವ ದೇವಾಲಯಗಳನ್ನು ನೋಡಿ: ಬಹುಮಟ್ಟಿಗೆ ಹಳೆಯ ಪ್ರಮಾಣಗಳನ್ನೇ, ಶೈಲಿಯನ್ನೇ ಅನುಕರಿಸುತ್ತೇವೆ. ಗಾಳಿ ಬೆಳಕು ಸಮೃದ್ಧಿಯಾಗಿ ಪ್ರವೇಶಿಸುವ ಗರ್ಭಗೃಹವನ್ನು ಕಾಣುವುದು ಬಹಳ ಅಪರೂಪ. ಆದಕಾರಣ ಆಗಿನ ಕಾಲದ ನೈಪುಣ್ಯವನ್ನಾಗಲೀ, ಶೈಲಿಯನ್ನಾಗಲೀ ಆಧುನಿಕ ದೃಷ್ಟಿಯಿಂದ ನೋಡಿದರೆ ತಪ್ಪಾಗುವುದು. ಸಂಪ್ರದಾಯವು ಮಧ್ಯಯುಗದ ಹಿಂದೂ ಸಂಸ್ಕೃತಿಯಲ್ಲಿ ಹೇಗೆ ನಿರಂಕುಶ ತತ್ತ್ವವಾಗಿತ್ತೋ ಅದೇ ರೀತಿ ಕ್ರೈಸ್ತ ಮತ್ತು ಇಸ್ಲಾಮೀ ಕಲಾಸಂಸ್ಕೃತಿಯಲ್ಲೂ ಕಂಡು ಬರುತ್ತದೆ. ಒಂದು ಚರ್ಚು ಅಥವಾ ಕ್ಯಾಥೆಡ್ರಲ್ (cathedral) ಅಥವಾ ಮಸೀದಿಯೆಂದರೆ ಅವುಗಳ ರೂಪರೇಖೆಗಳು ಪರಸ್ಪರ ಭಿನ್ನವಾಗಿರುತ್ತವೆ. ಈ ಕಟ್ಟಡಗಳನ್ನು ನೋಡಿದ ತಕ್ಷಣವೆ ಅವು ಯಾವ ಧರ್ಮಕ್ಕೆ ಅಥವಾ ಯಾವ ಪರಂಪರೆಗೆ ಸೇರಿದ್ದು ಎಂದು ನಮಗೆ ತಿಳಿಯುತ್ತದೆ. ಇದೇ ರೀತಿ ಭಾರತೀಯ ಕಲಾಪರಂಪರೆಯಲ್ಲಿ ಬೆಳೆದುಕೊಂಡು ಬಂದಿರುವ ವೈವಿಧ್ಯಕ್ಕೆ ಆಯಾ ಪ್ರಾದೇಶಿಕ ಸಂಪ್ರದಾಯಗಳೇ ಕಾರಣ.

ಇತರ ಧರ್ಮಗಳ ಪರಂಪರೆಗಳಲ್ಲಿ ತೋರಿಬರುವ ವಾಸ್ತುವಿನ್ಯಾಸಗಳಿಗೆಲ್ಲಾ ತಮ್ಮದೇ ಆದ ವ್ಯಕ್ತಿತ್ವವುಂಟು. ಈ ವ್ಯಕ್ತಿತ್ವವು ವಿಕಾಸಗೊಳ್ಳಲು ಅವರವರ ಪ್ರಾರ್ಥನಾ ಸಂಪ್ರದಾಯಗಳೇ ಕಾರಣ. ಈ ಅಂಶವನ್ನು ಕೂಲಂಕಷವಾಗಿ ಪರಿಶೀಲಿಸಿ ನೋಡಿದರೆ ಕೆಲವು ಸ್ವಾರಸ್ಯವಾದ ಲಕ್ಷಣಭೇದಗಳು ಕಂಡುಬರುತ್ತವೆ. ನಮ್ಮ ದೇವಸ್ಥಾನಗಳಲ್ಲಿ ಪೂಜಿಸಲ್ಪಡುವ ಲಿಂಗವನ್ನಾಗಲೀ, ಮೂರ್ತಿಗಳನ್ನಾಗಲೀ ಅರ್ಚಾವತಾರವೆಂದು ಹೇಳುತ್ತೇವೆ. ಇಂತಹ ದೇವಸ್ಥಾನವು ಪೂಜಾಮಂದಿರ. ಚರ್ಚು ಮತ್ತು ಮಸೀದಿಗಳ ಹಾಗೆ ಸಾಮುದಾಯಿಕ ಪ್ರಾರ್ಥನಾ ಮಂದಿರಗಳಲ್ಲ. ಅವುಗಳಲ್ಲಿ ನೂರಾರು ಜನರು ಒಟ್ಟುಗೂಡಿ ಒಂದೇ ರೀತಿಯಲ್ಲಿ ಪ್ರಾರ್ಥನೆ ಮಾಡಬಹುದು. ಅದರಲ್ಲಿ ಜಾತಿ, ಮತವಾಗಲೀ, ಸಿರಿವಂತ ಬಡವರೆಂದಾಗಲೀ ಭೇದವಿಲ್ಲ. ಗಣ್ಯ ವ್ಯಕ್ತಿಗಳಿಗೆ ವಿಶೇಷ ಮರ್ಯಾದೆಗಳಿಲ್ಲ. ಈ ಸಮತಾಭಾವನೆ ಸಿಖ್ಖರ ಗುರುದ್ವಾರದಲ್ಲೂ, ಬೌದ್ಧ ದೇವಾಲಯಗಳಲ್ಲೂ ಉಂಟು. ಈ ಪ್ರಬಂಧದಲ್ಲಿ ಇದನ್ನು ಉದಾಹರಿಸುವ ಕಾರಣವೇನೆಂದರೆ ಭಕ್ತಿಪರಂಪರೆಗೆ ಸೇರಿದ ಹಿಂದೂ ದೇವಾಲಯಗಳಲ್ಲಿ ಇಂತಹ ಮನೋಧರ್ಮವು ಏಕೆ ಬೆಳೆದುಕೊಂಡು ಬರಲಿಲ್ಲ ಎಂಬ ಅಂಶ ವಿಚಾರಾರ್ಹ. ನಾವು ದೇವಾಲಯದಲ್ಲಿ ಅರ್ಪಿಸುವ ಪೂಜೆಯು ಅರ್ಚಕನ ಮುಖಾಂತರವೇ ಆಗಬೇಕು. ನಮ್ಮ ಕೋರಿಕೆಗಳನ್ನು ಅರ್ಚಕನ ಮೂಲಕವೇ ನಿವೇದಿಸಿಕೊಳ್ಳಬೇಕು. ದೇವರ ದರ್ಶನವಾಗಬೇಕಾದರೂ ಕತ್ತಲೆಕೋಣೆಯಲ್ಲಿ ಅಲಂಕೃತವಾಗಿ ನಿಂತಿರುವ ಮೂರ್ತಿಪ್ರಜ್ಞೆಯು ಮಿನುಗುಟ್ಟುವ ಹಣತೆಯ ಪ್ರಕಾಶದಲ್ಲಿಯೋ, ಆರತಿಯ ಜ್ಯೋತಿಯಲ್ಲಿಯೋ ಆಗಬೇಕು. ಇದರ ಪರಿಣಾಮವೇನೆಂದರೆ ಗುಂಪುಗುಂಪಾಗಿ ನೆರೆದಿರುವ ಭಕ್ತಾದಿಗಳು ದೇವರ ದರ್ಶನಕ್ಕೆ ಪೈಪೋಟಿ ಮಾಡುತ್ತಾರೆ. ಒಬ್ಬರ ಮೇಲೊಬ್ಬರು ನುಗ್ಗಲು ಪ್ರಯತ್ನಿಸುವುದೂ ಉಂಟು. ಇಂತಹ ಸನ್ನಿವೇಶದಲ್ಲಿ ಪ್ರಾರ್ಥನೆಗಾಗಲೀ, ಧ್ಯಾನಕ್ಕಾಗಲೀ ಅವಕಾಶ ಸಿಗುವುದು ಸಾಧ್ಯವೇ? ದೇವಸ್ಥಾನದ ವಾಸ್ತುವಿನ್ಯಾಸವು ಪ್ರಧಾನವಾಗಿ ಪೂಜಾವಿಧಿಗಳಿಗೆ ಹೊಂದಿಕೆಯಾಗಿದೆ. ಈ ಎರಡೂ ಹಾಸುಹೊಕ್ಕಾಗಿರುವುದರಿಂದ ಭಕ್ತಿಪರಂಪರೆಯಲ್ಲಿ ಕಂಡುಬರುವ ಮನೋಧರ್ಮವು ವಾಸ್ತುಪರಂಪರೆಯ ಪ್ರಭಾವಕ್ಕೆ ಸಿಕ್ಕಿ ಸಂಕುಚಿತಗೊಳ್ಳುವುದಕ್ಕೆ ಅವಕಾಶವಾಗಿರಬಹುದು. ವೇಮನ, ಕನಕದಾಸರೇ ಮೊದಲಾದ ಸಂತರು ದೇವರ ದರ್ಶನ ಮಾಡಬೇಕಾದರೆ ಎಷ್ಟು ಸಾಹಸ ಪಡಬೇಕಾಯಿತು! ಮೂರ್ತಿಪೂಜೆಯು ಅನೇಕ ಸಲ ಆಡಂಬರದಲ್ಲಿ ಕೊನೆಗೊಂಡು ಮಡಿವಂತಿಕೆಗೆ ಸಿಕ್ಕಿ, ಸಮಾಜದಲ್ಲಿ ಮೇಲು ಕೀಳು ಎಂಬ ಭಾವನೆಯನ್ನು ಉತ್ತೇಜಿಸಿ, ಎಷ್ಟರಮಟ್ಟಿಗೆ ಭಕ್ತಿಪಂಥವನ್ನೇ ಸಡಿಲಗೊಳಿಸಿದೆ ಎಂಬುದನ್ನು ಪುರಂದರದಾಸರು ಸೊಗಸಾಗಿ ಹಾಡಿ ಅಣಕಿಸಿದ್ದಾರೆ. ಈ ಸಂತಶ್ರೇಷ್ಠರ ಕೊಡುಗೆ ನಮ್ಮ ಭಕ್ತಿಪರಂಪರೆಯಲ್ಲಿ ವಿಪುಲವಾಗಿದ್ದರೂ, ನಾವು ಎಷ್ಟೇ ಕೃತಜ್ಞತೆಯಿಂದ ಅವರ ನೆನಪನ್ನು ಮಾಡಿಕೊಂಡರೂ, ನಮ್ಮಲ್ಲಿ ಅನೇಕರ ಮನೋದೃಷ್ಟಿ ಇನ್ನೂ ಪರಿವರ್ತನೆಗೊಂಡಿಲ್ಲ. ನಾವು ಹೊಸದಾಗಿ ಕಟ್ಟುವ ದೇವಾಲಯಗಳ ವಾಸ್ತುವಿನ್ಯಾಸದಲ್ಲಿ ಬದಲಾವಣೆಯನ್ನು ಮಾಡಿಲ್ಲ. ಇದು ನಿಂದನೆಯ ಮಾತಲ್ಲ. ಗಮನಿಸಲು, ವಿಮರ್ಶೆಮಾಡಲು ಅರ್ಹವಾದ ವಿಷಯ.

ಯಾವುದೇ ಧರ್ಮಕ್ಕೆ ಸೇರಿದ ಪ್ರಾರ್ಥನಾಮಂದಿರಗಳೇ ಆಗಲಿ ಅವೆಲ್ಲವೂ ದೇವಸ್ಥಾನಗಳೇ ಹೌದು. ಪ್ರಾರ್ಥನಾ ಪದ್ಧತಿಯು ಬೇರೆ ಬೇರೆಯಾಗಿದ್ದರೂ ಅವುಗಳ ಮೂಲ ಉದ್ದೇಶವು ಬೇರೆಯಲ್ಲವಲ್ಲ! ಸೃಷ್ಟಿಸ್ಥಿತಿಗೆಲ್ಲಾ ಕಾರಣನಾದ ಭಗವಂತನು ಒಬ್ಬನೇ ಅಲ್ಲದೆ ಅನೇಕರು ಇರುವುದಕ್ಕೆ ಸಾಧ್ಯವೇ? ಕಾಲಕ್ರಮೇಣ ಪ್ರಪಂಚದ ಎಲ್ಲಾ ಧರ್ಮಗಳೂ ಭಾರತದಲ್ಲಿ ನೆಲೆಸಿರುವುದರಿಂದ ಅವು ಭಾರತದ ಸಂಸ್ಕೃತಿಯನ್ನು ಅನೇಕ ರೀತಿಯಲ್ಲಿ ಶ್ರೀಮಂತಗೊಳಿಸಿವೆ. ಸ್ವಲ್ಪಮಟ್ಟಿಗೆ ಪರಸ್ಪರ ಪ್ರಭಾವವನ್ನೂ ಬೀರಿವೆ. ಭಾರತೀಯರಾದ ನಾವು ಈ ಸಮ್ಮಿಶ್ರವಾದ ಕೊಡುಗೆಯನ್ನು ಗೌರವದಿಂದ ಒಪ್ಪಿಕೊಂಡು ಬಂದಿದ್ದೇವೆ. ಇದು ನಮ್ಮ ಸಂಸ್ಕೃತಿಯಲ್ಲಿ ಸಹಜವಾಗಿ ಬೆಳೆದುಬಂದಿರುವ ಮನೋಧರ್ಮ.

'ಸರ್ವದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ', 'ಏಕಂ ಸತ್

ವಿಪ್ರಾ ಬಹುಧಾ ವದಂತಿ', 'ಸರ್ವೇ ಸುಖಿನಸ್ಸಂತು ಸರ್ವೇ ಸಂತು ನಿರಾಮಯಾಃ। ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿತ್ ದುಃಖಭಾಕ್ ಭವೇತ್ ॥'

ಎಂಬ ಏಕದೇವ ಭಾವನೆಯೂ, ಸರ್ವರ ಸುಖಕ್ಷೇಮ ಗಳನ್ನೂ ಕೋರುವ ಈ ಮಂತ್ರಗಳು ಪ್ರಸಿದ್ಧ. **ವಸುಧೈವ ಕುಟುಂಬಕಂ**—ನಾವೆಲ್ಲರೂ ದೈವದೃಷ್ಟಿಯಲ್ಲಿ ಒಂದೇ ಕುಟುಂಬಕ್ಕೆ ಸೇರಿದವರು ಎಂಬ ಭಾವನೆ ಅನೇಕ ಶತಮಾನ ಗಳಿಂದ ಪ್ರಚಾರಕ್ಕೆ ಬಂದಿರುವ ತತ್ತ್ವ.

ದೇವಸ್ಥಾನವೆಂದರೆ ದೇವರನ್ನು ಪೂಜಿಸುವುದಕ್ಕೆ ಯೋಗ್ಯ ವಾದ ಸ್ಥಳ. ಸೃಷ್ಟಿಕರ್ತನಾದ ಕರುಣಾಮಯನಾದ, ಜಗದ್ರಕ್ಷಕನಾದ ಭಗವಂತನಿಗೆ, ನಾವು ಕಟ್ಟಿಕೊಟ್ಟ ವಾಸಸ್ಥಾನ ಬೇಕೇನು? **ಈಶಾವಾಸ್ಯಮಿದಂ ಸರ್ವಂ**—'ಇದೆಲ್ಲವೂ ಆ ಈಶನಿಂದ ವ್ಯಾಪ್ತವಾಗಿದೆ'— ಇದು ಈಶೋಪನಿಷತ್ತಿನ ಮಹಾವಾಕ್ಯ. ಸರ್ವವ್ಯಾಪಿಯಾದ ಆ ಭಗವಂತನನ್ನು ನಾವು ದೇವಾಲಯದಲ್ಲಿ ಬಂಧಿಸಿಟ್ಟಿಲ್ಲ. ಸೀಮಿತಸ್ವರೂಪದ ನಮ್ಮ ಬುದ್ಧಿಶಕ್ತಿಗೆ, ಇಂದ್ರಿಯಗ್ರಾಹ್ಯವಾಗುವ ಹಾಗೆ ನಾವು ಭಕ್ತಿ ಯಿಂದ ಕಲ್ಪಿಸಿಕೊಂಡಿರುವ ಒಂದು ಸಾಧನ, ಈ ದೇವಸ್ಥಾನ. ಅದು ಒಂದು ಕಟ್ಟಡವಾದರೂ, ತತ್ತ್ವದೃಷ್ಟಿಯಿಂದ ಕೇವಲ ಕಟ್ಟಡಮಾತ್ರವಲ್ಲ. ಅದೃಶ್ಯನೂ, ಅಗ್ರಾಹ್ಯನೂ, ಅನಂತನೂ, ಅಪ್ರಮೇಯನೂ, ಅವೇದ್ಯನೂ ಆದ ಆ ಭಗವಂತನನ್ನು ಅವಿದ್ಯೆಯಿಂದ ಆವೃತವಾಗಿರುವ ನಮ್ಮ ಮನಸ್ಸು ಯಾವ ದೃಷ್ಟಿಯಿಂದ ಧ್ಯಾನ ಮಾಡಬಲ್ಲುದೋ ಆ ದೃಷ್ಟಿಯಿಂದ ಲಾದರೂ ಮಾಡಿದರೆ ಸಾಕು ಎಂಬ ಗೀತಾಚಾರ್ಯನ ವಾಕ್ಯವನ್ನು ಸಮರ್ಥಿಸಲು ನಾವು ಬಳಸಿಕೊಂಡು ಬಂದಿ ರುವ ಪರಂಪರೆಯೇ ದೇಗುಲ. ನಮ್ಮಲ್ಲಿ ಮೂರ್ತಿಪೂಜೆಗೆ ಸ್ಥಾನವುಂಟು ಎಂದು ಹೇಳಿದ ಮಾತ್ರಕ್ಕೆ ಅಮೂರ್ತನಾದ ಪರಮಾತ್ಮನನ್ನು ಕೇವಲ ಪ್ರಾರ್ಥನೆಯಿಂದಾಗಲೀ, ಧ್ಯಾನ ದಿಂದಾಗಲೀ, ಯೋಗಸಾಧನೆಯಿಂದಾಗಲೀ ಪೂಜಿಸುವುದಕ್ಕೆ ಸಾಧ್ಯವಿಲ್ಲವೆಂದು ಯಾವ ಶಾಸ್ತ್ರವೂ ಹೇಳಿಲ್ಲ. ಪರಮಾತ್ಮನು ನಿರಾಕಾರನೂ ಹೌದು, ಸಾಕಾರನೂ ಹೌದು. ನಮ್ಮ ಧಾರ್ಮಿಕ ಕಲೆಯು ನಿರ್ಮಾಣವಾದದ್ದು ದಾರ್ಶನಿಕರಿಂದ ಅಲ್ಲ. ಯೋಗಿಗಳಿಗಾಗಲೀ, ತತ್ತ್ವಜ್ಞಾನಿಗಳಿಗಾಗಲೀ, ತಪಸ್ವಿ ಗಳಿಗಾಗಲೀ ದೇವಸ್ಥಾನಕ್ಕೆ ಹೋಗಿ ದೈವಾನುಭವವನ್ನು ಪಡೆಯುವ ಆವಶ್ಯಕತೆ ಬರುವುದಿಲ್ಲ. ಏಕೆಂದರೆ ಈ ಅನುಭವ ವನ್ನು ಅವರು ತಂತಮ್ಮ ಆಂತರ್ಯದ ಶಕ್ತಿಯಿಂದ ಪಡೆ ದವರು. ಆದರೆ ಸಾಮಾನ್ಯ ಜನರಿಗೆ ಈ ಅನುಭವವನ್ನು ಪಡೆಯಬೇಕೆಂಬ ಪ್ರೇರಣೆ ಎಲ್ಲಿಂದ ಬರಬೇಕು? ಸಾಮಾನ್ಯ ಮನುಷ್ಯನ ದೃಷ್ಟಿಯಲ್ಲಿ ಬ್ರಹ್ಮತತ್ತ್ವವು ಈಶ್ವರನ ಲೀಲಾ ವಿಭೂತಿಯಿಂದಲೇ ತಿಳಿಯಬೇಕು. ಸೀಮಿತವಾದ ಅವನ ಬುದ್ಧಿಗೆ ಭಗವಂತನ ರೂಪ ಲಾವಣ್ಯಗಳೂ, ಕಲ್ಯಾಣಗುಣ ಗಳೂ, ಸಾಹಿತ್ಯ ಮತ್ತು ಕಲೆಯ ರೂಪದಲ್ಲಿ ಕಾಣಿಸಿಕೊಂಡರೆ ಮಾತ್ರ ಅವನ ಭಾವತರಂಗಗಳಲ್ಲಿ ದೈವಿಕವಾದ ಸ್ಫೂರ್ತಿ ಹುಟ್ಟಲು ಅವಕಾಶ ಸಿಗಬಹುದು. ನಾಲ್ಕಾರು ಜನರು ಸಹಕರಿಸಿ ಪ್ರಾರ್ಥನಾಕಾರ್ಯಗಳಲ್ಲಿ ಭಾಗವಹಿಸಿದರೆ ಆಗ ಅವನ ದೃಷ್ಟಿಯಲ್ಲಿ ಈಶ್ವರತತ್ತ್ವಕ್ಕೆ ಒಂದು ರೀತಿಯ ಸಮರ್ಥನೆ ಸಿಗಬಹುದು. ತತ್ತ್ವಾನ್ವೇಷಣೆಯು ಕಷ್ಟಸಾಧ್ಯವಾಗಿ ಇರುವವನಿಗೆ ದೇವಸ್ಥಾನವು ದಾರಿಯನ್ನು ತೋರಿಸಬಹುದು. ಅಸದೃಶವಾಗಿರುವ ಪರಮಾತ್ಮನು ದಯಾಮಯನಾಗಿ ಇರುವುದರಿಂದ ಸದೃಶವಾಗಿರುವ ಮೂರ್ತಿಯ ಮೂಲಕ ಅವನಿಗೆ ಭಕ್ತಿಮಾರ್ಗದಲ್ಲಿ ಶ್ರದ್ಧೆಯನ್ನು ಬಿತ್ತಬಹುದು. ಈ ದೃಷ್ಟಿಯಿಂದಲೇ ಮೂರ್ತಿಪೂಜೆಯೂ, ದೇವಸ್ಥಾನವೂ ಅದಕ್ಕೆ ಸಂಬಂಧಪಟ್ಟ ಕಲೆಯೂ ನಮ್ಮ ಸಂಸ್ಕೃತಿಯಲ್ಲಿ ವಿಕಾಸ ಗೊಂಡಿರುವುದು. ಈ ಸಂದರ್ಭದಲ್ಲಿ ಸುಭಾಷಿತ ವಾಕ್ಯ ವೊಂದು ನೆನಪಿಗೆ ಬರುತ್ತದೆ:

ಅಗ್ನಿರ್ದೇವೋ ದ್ವಿಜಾತೀನಾಂ ಮುನೀನಾಂ ಹೃದಿ ದೈವತಂ ।
ಪ್ರತಿಮಾ ಸ್ವಲ್ಪಬುದ್ಧೀನಾಂ ಸರ್ವತ್ರ ವಿದಿತಾತ್ಮನಾಂ ॥

"ದ್ವಿಜರಿಗೆ ದೇವರು ಅಗ್ನಿರೂಪದಲ್ಲಿಯೂ, ಮುನಿ ವರ್ಯರಿಗೆ ಹೃದಯದಲ್ಲೂ, ಸ್ವಲ್ಪಬುದ್ಧಿಯುಳ್ಳವರಿಗೆ ಪ್ರತಿಮೆ ಗಳಲ್ಲಿಯೂ, ಆತ್ಮನ ಮರ್ಮವನ್ನು ತಿಳಿದವರಿಗೆ ಎಲ್ಲೆಲ್ಲಿಯೂ ಕಾಣಿಸಿಕೊಳ್ಳುತ್ತಾನೆ."

ಆದ್ದರಿಂದ ಕಲಾಕಾರನು ಬೆಳೆಸಿಕೊಂಡಿರುವ ಕಲೆಯು ಇಂದ್ರಿಯಾನುಭವಕ್ಕೆ ಸೀಮಿತವಾಗಿ ಉಳಿಯದೆ, ಸಾಮಾನ್ಯ ಜನರಲ್ಲಿ ಆಸ್ತಿಕತೆಯನ್ನು ಹುಟ್ಟಿಸುವುದಕ್ಕೆ ಒಂದು ಸಾಧನ ವಾಯಿತು. ಈ ನಮ್ಮ ಕ್ಷಣಿಕವಾದ ಜೀವನದಲ್ಲಿ ಸ್ಥಿರತೆ ಯನ್ನೂ, ಸನಾತನ ಧರ್ಮಕ್ಕೆ ರೂಪವನ್ನೂ, ಮನೋರಂಜನೆ ಯನ್ನೂ ಕೊಡತಕ್ಕದ್ದು ದೇವಾಲಯವೇ ಎಂಬ ನಂಬಿಕೆ ಶಿಲ್ಪಿಗಳ ಕಲೆಗೆ ಪ್ರೇರಣೆಯನ್ನು ಕೊಟ್ಟಿತು. ಕಾರ್ಲೆ, ಅಜಂತ, ಎಲ್ಲೋರ, ಮಹಾಬಲಿಪುರ, ಬಾದಾಮಿ ಇವೇ ಮೊದಲಾದ ಸ್ಥಳಗಳಲ್ಲಿ ಕೊರೆದಿರುವ ಬೌದ್ಧ, ಜೈನ ಮತ್ತು ಹಿಂದೂ ದೇವಾಲಯಗಳನ್ನು ನೋಡಿದರೆ ಆಗಿನ ಕಾಲದ ಶಿಲ್ಪಿಗಳ ಅತಿಮಾನುಷ ಚಾತುರ್ಯವೂ, ಸೃಜನಶೀಲತೆಯೂ, ಅಸಾಧಾರಣ ಭಕ್ತಿಪರವಶತೆಯೂ ನಮ್ಮನ್ನು ವಿಸ್ಮಯಗೊಳಿಸು ತ್ತವೆ. ಈ ದೇಗುಲ ಸಂಸ್ಕೃತಿಯು ವಿಕಾಸಗೊಂಡ ಶತಶತಮಾನ ಗಳ ಕಾಲವ್ಯಾಪ್ತಿಗೆ ಹೋಲಿಸಬಹುದಾದಂತಹ ಬೇರೊಂದು ಉದಾಹರಣೆ ಪ್ರಪಂಚದ ಇತಿಹಾಸದಲ್ಲಿ ಸಿಗುವುದು ಕಷ್ಟ.

ನಮ್ಮ ಈಗಿನ ಸಮಾಜದಲ್ಲಿ ದೇವಾಲಯಕ್ಕೆ ಇರುವ ಸ್ಥಾನಕ್ಕೂ ಸಾವಿರ ವರ್ಷಗಳ ಹಿಂದೆ ಇದ್ದ ಸ್ಥಿತಿಗೂ ಬಹಳ ವ್ಯತ್ಯಾಸವುಂಟು. ಹಿಂದೂಸಮಾಜಕ್ಕೆ ಭದ್ರತೆಯನ್ನೂ, ವ್ಯಕ್ತಿತ್ವವನ್ನೂ ಕೊಟ್ಟ ಮಧ್ಯಯುಗದ ಸಾಧನಗಳಲ್ಲಿ ದೇವಾಲಯಕ್ಕೆ ಬಹು ಮುಖ್ಯವಾದ ಸ್ಥಾನವಿತ್ತು. ಆಗಿನ ಸಮಾಜಜೀವನದಲ್ಲಿ ಸರಳತೆಯಿತ್ತು. ಸಂಪ್ರದಾಯಕ್ಕೂ ಪರಂಪರೆಗೂ ಅತಿಯಾದ ಮಾನ್ಯತೆಯಿತ್ತು. ಅವರಲ್ಲಿ ತೃಪ್ತಿಜೀವನವೇ ಪ್ರಧಾನವಾದ ಮೌಲ್ಯವಾಗಿತ್ತು. ದೇವಾಲಯವೆಂದರೆ ಒಂದು ಊರಿಗೆ, ಅಲ್ಲಿನ ಸಮಾಜಜೀವನಕ್ಕೇ ಕೇಂದ್ರವಾಗಿತ್ತು. ಸಂಗೀತ, ನಾಟ್ಯ, ನಾಟಕ, ಹರಿಕಥೆ ಮತ್ತು ಪ್ರವಚನಗಳು ದೇವಸ್ಥಾನಗಳಲ್ಲಿ ನಡೆಯುತ್ತಿದ್ದುವು. ಊರಿನ ಪೌರಸಭೆಯು ತನ್ನ ಆವರಣದಲ್ಲೇ ಕಾರ್ಯಕಲಾಪಗಳನ್ನು ನಡೆಸುತ್ತಿತ್ತು. ಜನರ ಆರ್ಥಿಕ ಜೀವನವು, ಆಚಾರವ್ಯವಹಾರಗಳು, ಹಬ್ಬಗಳೇ ಮೊದಲಾದ ಚಟುವಟಿಕೆಗಳು ದೇವಸ್ಥಾನದೊಂದಿಗೆ ಒಂದಲ್ಲ ಒಂದು ವಿಧದಲ್ಲಿ ಹೆಣೆದುಕೊಂಡು ಬಂದಿದ್ದುವು. ಅನೇಕ ಕಡೆಗಳಲ್ಲಿ ವೈದ್ಯಶಾಲೆ, ವೇದಪಾಠಶಾಲೆ ಮತ್ತು ಯಾತ್ರಿಕರ ವಸತಿಗೃಹಗಳು ದೇವಸ್ಥಾನದ ಆಡಳಿತಕ್ಕೇ ಅಧೀನವಾಗಿದ್ದು ಇವಕ್ಕೆಲ್ಲಾ ಸಲ್ಲುವ ವೆಚ್ಚವನ್ನು ದೇವಾಲಯವೇ ಭರಿಸುತ್ತಿತ್ತು. ದೇವಾಲಯಗಳಿಗೆ ರಾಜಕುಟುಂಬದವರೂ, ಅಧಿಕಾರ ಮತ್ತು ವರ್ತಕವರ್ಗದವರೂ ಅಲ್ಲದೆ ಭಕ್ತಾದಿಗಳೂ ಭೂಮಿಯನ್ನೋ ಹಣವನ್ನೋ ದನಕರುಗಳನ್ನೋ ದಾನಮಾಡುತ್ತಿದ್ದರು. ಈ ಆಸ್ತಿಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವುದಕ್ಕೂ, ಆಗಿಂದಾಗ್ಗೆ ದೇವಾಲಯಕ್ಕೆ ಸಂಬಂಧಪಟ್ಟ ಉತ್ಸವಾದಿಗಳು ಮತ್ತು ಕೈಂಕರ್ಯಗಳನ್ನು ನಡೆಸಿಕೊಂಡು ಹೋಗುವುದಕ್ಕೂ ಜನರಿಂದ ಚುನಾಯಿಸಲ್ಪಟ್ಟ ಸಭೆಯಿತ್ತು. ತಂಜಾವೂರಿನ ಬೃಹದೀಶ್ವರ ದೇವಾಲಯದಲ್ಲಿ ಕೆಲಸಮಾಡುತ್ತಿದ್ದ ಸೇವಕರ ಸಂಖ್ಯೆಯನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಅವರಲ್ಲಿ ನಾಟ್ಯ ಮತ್ತು ಸಂಗೀತವನ್ನು ಹೇಳಿಕೊಡುವವರು, ನಟಿಯರು, ಮೇಳಕಾರರು, ಗುಮಾಸ್ತರು. ನೀರು ಸರಬರಾಜಿನವರು, ಕುಂಬಾರರು, ನಾಪಿತರು, ಜೋಯಿಸರು, ದರ್ಜಿಗಳು, ಮರಗೆಲಸದವರು, ಅಕ್ಕಸಾಲಿಗರು, ವೇದಾಧ್ಯಯನಸಂಪನ್ನರು, ತೇವಾರಂ ಹಾಡುವವರು, ಪೂಜಾರಿಗಳು ಮತ್ತು ಅವರ ಸಹಾಯಕರು, ಹೂಗಾರರು, ಗಾಣಿಗರು, ಛತ್ರಿಚಾಮರಗಳನ್ನು ಹಿಡಿಯುವವರು, ದೀವಟಿಗೆಯವರು, ಕಾವಲುಗಾರರು ಮತ್ತು ಇನ್ನೂ ಅನೇಕ ಸಣ್ಣಪುಟ್ಟ ಕೈಂಕರ್ಯಗಳನ್ನು ಮಾಡುವ ಗಂಡಸರು ಮತ್ತು ಹೆಂಗಸರು ಇದ್ದುದಕ್ಕೆ ಶಾಸನಗಳ ಸಮರ್ಥನೆಯಿದೆ. ಇವರಿಗೆಲ್ಲ ಸಂಬಳಸಾರಿಗೆಗಳನ್ನು ಕೊಡುವುದಕ್ಕೆ ಅನುಕೂಲವಾಗುವಂತೆ ದೇವಾಲಯದ ಜಮೀನುಗಳ ಮೇಲೆ ರಾಜರು ಕಂದಾಯವನ್ನು ರದ್ದು ಮಾಡಿದ್ದರು. ಆಡಳಿತದಲ್ಲಿ ಭ್ರಷ್ಟಾಚಾರಗಳು ಕಂಡುಬಂದರೆ ತಕ್ಷಣವೇ ಸಭಾಸದಸ್ಯರು ಸೇರಿ ಈ ವಿಷಯವನ್ನು ಚರ್ಚಿಸಿ ಅಪರಾಧಿಗೆ ತಕ್ಕ ಶಿಕ್ಷೆಯನ್ನು ವಿಧಿಸುತ್ತಿದ್ದರು. ಇದಲ್ಲದೆ ಗ್ರಾಮದ 'ನ್ಯಾಯತ್ತಾರ್' ಅಂದರೆ ನ್ಯಾಯಾಧಿಕಾರಿಗಳು ದೇವಸ್ಥಾನದ ಸಭಾಂಗಣದಲ್ಲೇ ಪಂಚಾಯಿತಿಗೆ ಕುಳಿತು ವಾದಿಪ್ರತಿವಾದಿಗಳನ್ನು ಪರೀಕ್ಷಿಸಿ ತೀರ್ಪುಕೊಡುತ್ತಿದ್ದರು. ದೇವರ ಸಾನ್ನಿಧ್ಯದಲ್ಲಿ ಸುಳ್ಳುಸಾಕ್ಷಿಯನ್ನು ಹೇಳಲೂ ಹೆದರಿಕೆಯಿತ್ತು. ಅತಿವೃಷ್ಟಿ ಅನಾವೃಷ್ಟಿ ಕಾಲಗಳಲ್ಲಿ ಕ್ಷಾಮಪರಿಸ್ಥಿತಿ ತೋರಿದರೆ ದೇವಾಲಯದ ಖಜಾನೆಯಿಂದ ಸಾಲಕೊಡುವುದೂ, ಆ ಸಾಲವನ್ನು ತೀರಿಸಲು ಆಗದಿದ್ದರೆ ಸಾಲಗಾರರನ್ನು ದೇವಾಲಯದ ಕಾರ್ಮಿಕರನ್ನಾಗಿ ಮಾಡಿಕೊಳ್ಳುವುದೂ ಶಾಸನಗಳಿಂದ ಕಂಡುಬಂದಿದೆ. ಒಟ್ಟಿನಲ್ಲಿ ಪಾಮರರ ದೃಷ್ಟಿಯಲ್ಲಿ ತಮ್ಮೂರಿನ ದೇವಾಲಯವೆಂದರೆ ಅದಕ್ಕೆ ರಾಜನಿಗೆ ಸಮಾನವಾದ ಸ್ಥಾನವಿದ್ದು ಅದು ವ್ಯಕ್ತಿಯ ಲೌಕಿಕ ಜೀವನದ ಮೇಲ್ವಿಚಾರಣೆಯನ್ನು ನಡೆಯಿಸುವ ಕೇಂದ್ರಸ್ಥಾನವಾಗಿತ್ತು. ರಾಜನು ದೇವರ ಪ್ರತಿನಿಧಿಯೆಂಬ ನಂಬಿಕೆ ಇದ್ದದ್ದರಿಂದಲೂ. ವೃತ್ತಿಶೀಲತೆಯೂ. ಸಮಾಜವ್ಯವಹಾರಗಳೂ, ವ್ಯಕ್ತಿಜೀವನವೂ ಶಾಸ್ತ್ರಸಂಪ್ರದಾಯಗಳಿಗೆ ಒಳಪಟ್ಟಿರಬೇಕೆಂಬ ನಂಬಿಕೆಯಿದ್ದಿದ್ದರಿಂದಲೂ, ಕುಟುಂಬ ಮತ್ತು ಸಮಾಜ ಜೀವನದಲ್ಲಿ ಪರಸ್ಪರ ಹೊಂದಾಣಿಕೆಯುಂಟಾಗಿ ಅರಸೊತ್ತಿಗೆಯು ನಿರ್ವಹಿಸುವ ಅನೇಕ ಜವಾಬ್ದಾರಿಯುತ ಕಾರ್ಯಗಳು ದೇವಸ್ಥಾನದ ಮೂಲಕವೇ ನಡೆದುಕೊಂಡು ಬರಲು ಸಾಧ್ಯವಾಯಿತು.

ಆದರೆ, ಈಗ ಇರುವ ಪರಿಸ್ಥಿತಿಗಳೇ ಬೇರೆ. ನಾವಿರುವುದು ವಿಜ್ಞಾನಯುಗದಲ್ಲಿ, ಯಾಂತ್ರಿಕ ಯುಗದಲ್ಲಿ. ಕ್ಷಣಕ್ಷಣಕ್ಕೂ ಇತರ ಸಂಸ್ಕೃತಿಗಳ ಮತ್ತು ಸ್ವೇಚ್ಛಾಪ್ರವೃತ್ತಿಗಳ ಪ್ರಭಾವವು ನಮ್ಮ ವೈಯಕ್ತಿಕ ಜೀವನದಲ್ಲಿಯೂ ಸಮಾಜಜೀವನದಲ್ಲಿಯೂ ಕಾಣಬರುತ್ತಿದೆ. ಇಷ್ಟಾದರೂ ಬಹುಮಟ್ಟಿಗೆ ಜನರಲ್ಲಿ ಆಸ್ತಿಕತೆ ಇರುವುದು ಶ್ಲಾಘನೀಯ. ಈ ಆಸ್ತಿಕತೆ ಇರುವುದರಿಂದಲೇ ಅನೇಕ ಸ್ಥಳಗಳಲ್ಲಿ ಹೊಸಹೊಸದಾಗಿ ದೇವಸ್ಥಾನಗಳು ನಿರ್ಮಾಣವಾಗುತ್ತಿವೆ. ಈಗ, ಹಿಂದಿನ ಕಾಲದಂತೆ ದೇವಸ್ಥಾನಕ್ಕೆ ಸರ್ಕಾರದ ಒತ್ತಾಸೆಯಿಲ್ಲ. ಕೇವಲ ಭಕ್ತಾದಿಗಳ ಶ್ರದ್ಧೆಯಿಂದ, ಅವರ ಆರ್ಥಿಕ ಬೆಂಬಲದಿಂದ ಅವು ಉಳಿಯಬೇಕು. ಎಂದಿದ್ದರೂ ಭಗವಂತನು ಭಕ್ತಪರಾಧೀನನಲ್ಲವೇ?

ಈಗಿನ ನಮ್ಮ ಸಮಾಜದಲ್ಲಿ ದೇವಸ್ಥಾನವು ಹೇಗಿರಬೇಕು? ನಮ್ಮ ಜೀವನಶೈಲಿಯು ಸರ್ವದಾ ಮಾರ್ಪಾಡಾಗುತ್ತಿರುವ ಪರಿಸ್ಥಿತಿಯಲ್ಲಿ ಮಂದಿರಗಳಿಗೆ ಸೃಜನಶೀಲವಾದ ಪಾತ್ರವೊಂದು ಉಂಟೆ? ನಮ್ಮ ಆಧ್ಯಾತ್ಮಿಕ ಪರಂಪರೆಗೂ, ನೈತಿಕ

ಜೀವನಕ್ಕೂ, ವ್ಯವಹಾರಕ್ಷೇತ್ರಕ್ಕೂ ಶ್ರೇಯಸ್ಕರವಾದ ಸಂಬಂಧವನ್ನು ಕಲ್ಪಿಸಿ, ಜನಸಾಮಾನ್ಯರ ಜೀವನದಲ್ಲಿ ಶಾಂತಿ ಸೌಹಾರ್ದವನ್ನು ಉಂಟುಮಾಡಲು ಸಾಧ್ಯವೇ? ಅಥವಾ ಕೇವಲ ಸಂಪ್ರದಾಯರಕ್ಷಣೆಯನ್ನೇ ಧ್ಯೇಯವಾಗಿಟ್ಟುಕೊಂಡು ಪ್ರಾಚೀನ ಯುಗವೇ ಸುವರ್ಣಯುಗವೆಂದು ಭಾವಿಸಿ ಸುಧಾರಣೆಗಳ ವಿಷಯದಲ್ಲಿ ನಾವು ಅಸಡ್ಡೆ ತೋರಿಸುತ್ತಿದ್ದೇವೆಯೆ? ಇವು ಮೂಲಭೂತ ಪ್ರಶ್ನೆಗಳು. ನಮ್ಮ ಭಾರತೀಯ ಸಮಾಜದಲ್ಲಿ—ಹಿಂದೂಗಳಲ್ಲಾಗಲೀ, ಇತರರಲ್ಲಾಗಲೀ—ಆಸ್ತಿಕತೆ ಬಹುಮಟ್ಟಿಗೆ ಇನ್ನೂ ಜೀವಂತವಾಗಿದೆ. ನಮ್ಮ ನೀತಿನಡವಳಿಕೆಗಳಲ್ಲಿ ಈ ಸಂಪತ್ತನ್ನೇ ಆಧಾರವನ್ನಾಗಿ ಇಟ್ಟುಕೊಂಡು ಭಗವತ್ ಸಾನ್ನಿಧ್ಯದಲ್ಲಿ ಮೇಲು ಕೀಳು ಭಾವನೆಗೆ ಅವಕಾಶವಿಲ್ಲ ಎಂಬುದನ್ನು ತೋರಿಸಬೇಕು. ಜನರಲ್ಲಿ ಧರ್ಮದ ವಿಚಾರದಲ್ಲಿ ಮನೋವೈಶಾಲ್ಯವನ್ನು ಬೆಳೆಸುವ ಪ್ರವಚನಗಳು ನಿತ್ಯವೂ ನಡೆಯಬೇಕು. ಇದು ಬಹು ಮುಖ್ಯ. ವಿಷ್ಣುಧರ್ಮೋತ್ತರ ಪುರಾಣದಲ್ಲಿ ಒಂದು ಮಾತಿದೆ:

**ಶ್ರುಣುತೇ ಸರ್ವಧರ್ಮಾಂಶ್ಚ ಸರ್ವಾನ್ ದೇವಾನ್ ನಮಸ್ಯತಿ।**
**ಅನಸೂಯೂರ್ಜಿತ ಕ್ರೋಧಃ ತಸ್ಯ ತುಷ್ಯತಿ ಕೇಶವಃ ॥**

"ಯಾವಾತನು ಎಲ್ಲಾ ಧರ್ಮಗಳಿಗೂ ಕಿವಿಗೊಡುವನೋ, ಎಲ್ಲಾ ದೇವತೆಗಳನ್ನೂ ನಮಸ್ಕರಿಸುವನೋ, ಯಾರು ಮನಸ್ಸಿನಲ್ಲಿ ಅಸಹಿಷ್ಣುತೆಯನ್ನಾಗಲೀ, ಕ್ರೋಧವನ್ನಾಗಲೀ ಇಟ್ಟುಕೊಂಡಿಲ್ಲವೋ ಅಂತಹವನಿಗೆ ಕೇಶವನ ಅನುಗ್ರಹವಿರುವುದು." ಅಂದಮೇಲೆ ಭಗವದನುಗ್ರಹಕ್ಕೆ ಸರ್ವರಿಗೂ ಅಧಿಕಾರವುಂಟು ಎಂಬುದನ್ನು ನಮ್ಮ ಧಾರ್ಮಿಕ ವ್ಯವಹಾರದಲ್ಲಿ ಪ್ರಕಾಶಿಸುವಂತೆ ಮಾಡಬೇಕು. ಸಾಮೂಹಿಕ ಪ್ರಾರ್ಥನೆಯು ಭಕ್ತರನ್ನು ಸಮಾನರನ್ನಾಗಿ ಒಂದುಗೂಡಿಸುವ ಒಂದು ಸಾಧನೆ. ಇದನ್ನು ನಮ್ಮಲ್ಲಿ ಜಾರಿಗೆ ತರಬೇಕು. **ಸಮಾನೋ ಮಂತ್ರಃ ಸಮಿತಿಸ್ಸಮಾನಂ ಸಮಾನಂ ಮನಃ ಸಹಚಿತ್ತಮೇಷಾಂ ಸಮಾನೀವ ಆಕೂತಿಃ ಸಮಾನೋ ಹೃದಯಾನಿ ವಃ**—ಇದು ವೇದವಾಕ್ಯ. ಸಾಮೂಹಿಕ ಪ್ರಾರ್ಥನೆಯಲ್ಲಿ ಜಾತಿಭೇದವಾಗಲೀ, ಲಿಂಗಭೇದವಾಗಲೀ ಇರಕೂಡದು. ಪ್ರಾರ್ಥನೆ, ಧ್ಯಾನ, ಮೌನ, ಪರಮತಸಹಿಷ್ಣುತೆ ಇವೆಲ್ಲವೂ ಆಸ್ತಿಕನಲ್ಲಿ ಇರಬೇಕಾದ ಸ್ವಭಾವ ಲಕ್ಷಣಗಳು. ನಮ್ಮ ದೇಶದಲ್ಲಿ ನೂರಾರು ಭಕ್ತಾಗ್ರೇಸರೂ, ಸಾಧುಸಂತರೂ, ಮುನಿವರ್ಯರೂ ಬಿಟ್ಟುಹೋಗಿರುವ ಕೊಡುಗೆಯ ಸಾರಾಂಶವೇ ಇದು. ಧರ್ಮಕ್ಕೆ ಚ್ಯುತಿಯಿಲ್ಲ ಎಂಬ ವಾಕ್ಯವನ್ನು ನಾವೆಲ್ಲರೂ ಕೇಳಿದ್ದೇವೆ. ಈ ಮಾತು ಎಲ್ಲಿಯವರೆಗೆ ಅರ್ಥಪೂರ್ಣವಾಗಿರುವುದೆಂದರೆ, **ಧರ್ಮೋ ರಕ್ಷತಿ ರಕ್ಷಿತಃ**—ಧರ್ಮವು ನಮ್ಮನ್ನು ರಕ್ಷಿಸಬೇಕಾದರೆ ಆ ಧರ್ಮವನ್ನು ರಕ್ಷಿಸಿಕೊಂಡು ಬರುವ ಹೆಮ್ಮೆಯ ಹೊಣೆ ನಮಗೆ ಸೇರಿದ್ದು. ಅದಕ್ಕೆ ದೇವಾಲಯವೆಂಬುದು ಒಂದು ಉಪಯುಕ್ತವಾದ ಸಾಧನ. *



# ಪ್ರಹಸನ ಪ್ರಸಂಗ

ರಾಮು : ಶಿವು! ನಿನ್ನಂಥ ಗೆಳೆಯನಿರುವುದು ನನ್ನ ಭಾಗ್ಯ. ಕೊನೆಯ ತನಕ ನನ್ನೊಡನೆ ಇರುವೆ ಎಂದು ನೀನೊಬ್ಬನೇ ಹೇಳಿರುವುದು.

ಶಿವು : ಖಂಡಿತ ರಾಮು! ಕೊನೆಯ ತನಕ ನಾನು ನಿನ್ನ ಗೆಳೆಯನಾಗಿಯೇ ಇರುತ್ತೇನೆ.

ರಾಮು : ಲೋ ಶಿವು! ಹಾಗಾದರೆ ನನಗೆ ಸ್ವಲ್ಪ ಕಷ್ಟ ಬಂದಿದೆ. ನನಗೆ ಐದು ಸಾವಿರ ಸಾಲ ಕೊಡುವಿಯಾ?

ಶಿವು : ಇಲ್ಲ, ರಾಮು! ಕ್ಷಮಿಸು, **ನಮ್ಮ ಸ್ನೇಹದ ಕೊನೆ ಇದೇ!**

***

ರೋಗಿ : ಡಾಕ್ಟರ್! ನಾನು ಮಲಗಿದ ಕೂಡಲೇ ಗೊರಕೆ ಹೊಡೆಯುತ್ತೇನೆ. ಅದನ್ನು ತಡೆಯುವುದು ಹೇಗೆ?

ಡಾಕ್ಟರ್ : ಓಹೋ! ಇದರಿಂದ ನಿಮ್ಮ ಪತ್ನಿಗೆ ತೊಂದರೆಯೇ?

ರೋಗಿ : ಇಲ್ಲ! ಇಲ್ಲ! ನಾನು ಅವಿವಾಹಿತ.

ಡಾಕ್ಟರ್ : ಹಾಗಾದರೆ ಏಕೆ ಯೋಚಿಸುತ್ತೀರಿ?

ರೋಗಿ: ಅಯ್ಯೋ! ಸಮಸ್ಯೆಯನ್ನು ಏನೆಂದು ಹೇಳಲಿ? ನನ್ನ ಗೊರಕೆಯ ಅಭ್ಯಾಸದಿಂದ ಈಗಾಗಲೇ ಐದು ಒಳ್ಳೆಯ ಕೆಲಸಗಳನ್ನು ಕಳೆದುಕೊಂಡಿದ್ದೇನೆ. ***

ನರ್ಸ್ : ಡಾಕ್ಟರ್! ನೀವು ಕೂಡಲೇ ಬರಬೇಕು. ಅಪಘಾತದಲ್ಲಿ ಗಾಯಗೊಂಡ ವ್ಯಕ್ತಿ ಬಂದಿದ್ದಾನೆ.

ಡಾಕ್ಟರ್ : ನಾನು ಈಗಲೇ ಬರುತ್ತೇನೆ. ರೋಗಿಯ ಹೆಸರನ್ನು ಕೇಳಿಕೋ. ಕೂಡಲೇ ಅವನ ಮನೆಯವರಿಗೆ ತಿಳಿಸಬೇಕು.

ನರ್ಸ್ : ನಾನು ಕೇಳಿದೆ ಡಾಕ್ಟರ್. ಅವನು, 'ನನ್ನ ಮನೆಯವರಿಗೆ ನನ್ನ ಹೆಸರು ಗೊತ್ತಿದೆ ಹೋಗ್ರೀ' ಎಂದುಬಿಟ್ಟ.

***

ಒಂದೇ ಕಟ್ಟಡದಲ್ಲಿ ಇಬ್ಬರು ವೈದ್ಯರು ತಮ್ಮ ಕ್ಲಿನಿಕ್‌ಗಳನ್ನು ಪ್ರಾರಂಭಿಸಿದರು. ಇಬ್ಬರೂ ತಜ್ಞರೇ. ಆದರೆ ಕೆಳಗಿನ ಮಹಡಿಯಲ್ಲಿದ್ದ ವೈದ್ಯರ ಬಳಿಗೇ ರೋಗಿಗಳು ಹೆಚ್ಚು. ಇದಕ್ಕೆ ಕಾರಣ ಏನು ಎಂದು ಮೊದಲನೇ ಮಹಡಿಯಲ್ಲಿದ್ದ ವೈದ್ಯ ತಲೆಕೆರೆದುಕೊಂಡ. ಪರಿಹಾರವಿಲ್ಲದೆ ಒಬ್ಬ ರೋಗಿಯನ್ನೇ ಕೇಳಿದ, "ನೀವು ನನ್ನ ಬಳಿಗೆ ಏಕೆ ಬರುವುದಿಲ್ಲ? ಕೆಳಗಿನ ವೈದ್ಯರ ಬಳಿಗೇ ಏಕೆ ಹೋಗುತ್ತೀರಿ?" ರೋಗಿ ಹೇಳಿದ, "ಮತ್ತೆ ಸಾರ್, ತಮ್ಮ ಹೆಸರಿನ ಪಕ್ಕದಲ್ಲಿ 'ಮೇಲಕ್ಕೆ ಹೋಗಲು ದಾರಿ' ಎಂದು ಹಾಕಿದ್ದೀರಲ್ಲ ಸಾರ್!"

***

*